ಮುಖ್ಯ ಮಂತ್ರಿ ಪರಿಹಾರ ನಿಧಿಯಿಂದ ಮಂಜೂರಾದ ಮೊಬಲಗಂ

೧೦೩೯ ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ರಾಜ್ಯದಲ್ಲಿ ನೊಂದವರಿಗೆ ಒದಗಿಸಿದ ಹಣ ಎಷ್ಟು ? (೧೯೮೫–೮೬ ಮತ್ತು ೧೯೮೬–೮೭ ವರ್ಷವಾರು ಮತ್ತು ಜಿಲ್ಲಾವಾರು ವಿವರ ನೀಡುವುದು).

ಆ) ಯಾವ ಆದ್ಯತೆ ಮೇಲೆ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಹಣ ಮಂಜೂರು ಮಾಡಲಾಗುವುದು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೯೮೫-೮೬ರಲ್ಲಿ ರೂ. ೨೬,೮೨,೧೨೮-೦೦ ೧೯೮೬-೮೭ರಲ್ಲಿ (ಫೆಬ್ರುವರಿ ೮೭ರವರೆಗೆ)೩೨,೪೮, ೬೫೨–೦೦ (ವಿವರಣಾ ಪಟ್ಟಿಯನ್ನು ಲಗತ್ತಿಸಲಾಗಿದೆ).

ಆ) ಪರಿಹಾರವನ್ನು ಮುಖ್ಯಮಂತ್ರಿಯವರ ಪರಿಹಾರ ನಿಧಿ ನಿಯಮಗಳು, ೧೯೭೮ ಇದರ ಅನ್ವಯ ಈ ಕೆಳಗಿನ ಸಂದರ್ಭಗಳಲ್ಲಿ ಪ್ರತಿಯೊಂದು ಪ್ರಕರಣಗಳ ತೀವ್ರತೆಯನ್ನು ಪರಿಗಣಿಸಿ, ಪರಿಹಾರ ಹಣವನ್ನು ನೀಡಲಾಗುತ್ತಿದೆ.

೧) ಕಡು ಬಡತನ.

೨) ನಿರುದ್ಯೋಗ.

೩) ಖಾಯಿಲೆ

೪) ಅಂಗವಿಕಲತೆ.

೫) ಕುಟುಂಬದಲ್ಲಿ ದುಡಿಯುವವರು ಅಪಘಾತದಲ್ಲಿ ಮೃತಪಟ್ಟಲ್ಲಿ ಮತ್ತು ವೈದವ್ಯ ಪ್ರಾಪ್ತಿಯಾದಲ್ಲಿ.

೬) ಅಪಘಾತದಿಂದಾಗಿ ಉಂಟಾಗಿರುವ ಆಸ್ತಿ ಪಾಸ್ತಿ ನಷ್ಟ.

ಮಂಖ್ಯಿಮಂತ್ರಿಯವರ ಪರಿಹಾರ ನಿಧಿಯಿಂದ ೧೯೮೫–೮೬ ಮತ್ತು ೧೯೮೬–೮೭ (ಫೆಬ್ರವರಿ ಮಾಹೆ) ವರೆಗೂ ಮಂಜೂರು ಮಾಡಿರುವ ಹಣದ ವಿವರ

ಕ್ರಮ ಸಂಖ್ಯೆ	ಜಿಲ್ಲಾವಾರು	ಮೊತ್ತ	
		೧೯೮೫–೮೬	೧೯೮೬–೮೭
೧	ಬೆಂಗಳೂರು	೯,೧೩,೬೨೩	೧೩,೧೬,೨೪೪
೨	ಕೋಲಾರ	೪೪,೯೦೦	೧,೧೭,೨೦೬
೩	ತುಮಕೂರು	೮೭,೨೫೦	೬೦,೧೭೫
೪	ಚಿತ್ರದುರ್ಗ	೫೪,೮೦೦	೨೨,೨೦೦
೫	ಶಿವಮೊಗ್ಗ	೧,೮೩,೪೨೦	೧,೭೫,೨೨೫
೬	ಮೈಸೂರು	೧,೨೩,೬೦೦	೧,೮೬,೬೫೦
೭	ಮಂಡ್ಯ	೮೬,೫೦೦	೫೧,೯೦೦
೮	ಹಾಸನ	೯೧,೮೦೦	೩೩,೩೦೦
೯	ಚಿಕ್ಕಮಗಳೂರು	೪೯,೨೦೦	೫೯,೯೯೦
೧೦	ಕೊಡಗು	೧೩,೦೮೦	೧೯,೩೦೦
೧೧	ದಕ್ಷಿಣ ಕನ್ನಡ ಜಿಲ್ಲೆ	೮೧,೬೦೦	೧,೭೧,೪೦೨
೧೨	ಬೆಳಗಾವಿ	೧,೪೪,೮೫೦	೧,೩೮,೮೫೦
೧೩	ಬಿಜಾಪುರ	೩೪.೨೫೦	೧,೦೫,೯೫೦
೧೪	ಧಾರವಾಡ	೧,೫೦,೯೦೦	೧,೯೪,೪೧೫
೧೫	ಉತ್ತರ ಕನ್ನಡ	೧,೦೮,೬೫೦	೧,೯೮,೧೦೦
೧೬	ಗುಲ್ಬರ್ಗಾ	೧,೭೬,೦೦೦	೧,೦೦,೭೨೫
೧೭	ರಾಯಚೂರು	೮೯,೨೧೦	೭೭,೬೫೦
೧೮	ಬೀದರ್	೧,೪೯,೬೨೫	೧,೯೦,೯೯೫
೧೯	ಬಳ್ಳಾರಿ	೫೮,೯೫೦	೨೮,೩೭೫
	ಒಟ್ಟು	೨೬,೮೨,೧೨೮	೩೨,೪೮,೬೫೨

ಹಾಸನದಲ್ಲಿ ಟಿ.ವಿ. ಕೇಂದ್ರ ಸ್ಥಾಪಿಸುವ ಬಗ್ಗೆ

೧೦೩೧) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಮಂಖ್ಯಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನದಲ್ಲಿ ಟಿ.ವಿ. ಕೇಂದ್ರ ಸ್ಥಾಪನೆಯ ಬಗ್ಗೆ ಸರ್ಕಾರದವರು ಕೇಂದ್ರ ಸರ್ಕಾರದವರೊಡನೆ ವ್ಯವಹರಿಸಿದ್ದಾರೆಯೇ ?

ಆ) ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು ?

ಇ) ಈ ಕೇಂದ್ರದಿಂದ ಪ್ರಯೋಜನ ಪಡೆಯುವ ಪ್ರದೇಶಗಳಾವುವು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಮತ್ತು ಆ) ಹಾಸನದಲ್ಲಿ ದೂರದರ್ಶನ ಪುರಾ ಪ್ರಸಾರ ಕೇಂದ್ರ ದಿನಾಂಕ ೧೪–೧೧–೧೯೮೬ ರಿಂದ ಪ್ರಾರಂಭವಾಗಿದೆ.

ಇ) ಈ ಕೇಂದ್ರದಿಂದ ೭೦ಕಿ.ಮೀ.ಸುತ್ತಮುತ್ತಲಿನ ಪ್ರದೇಶಗಳು ಪ್ರಯೋಜನ ಪಡೆಯುತ್ತವೆ.